**ಕರ್ನಾಟಕ ಸರ್ಕಾರ**
**ಪಂಚಾಯತ್ ರಾಜ್ ಆಯುಕ್ತಾಲಯ**
**ಕಾಳಿದಾಸ ಮಾರ್ಗ, ಕೆ.ಜಿ.ರಸ್ತೆ, ಬೆಂಗಳೂರು – 560 009.**

ಸಂಖ್ಯೆ: ಕಪಂರಾಆ/ ಅಭಿವೃದ್ಧಿ/ರಾಹೆಮದಿ/42/2023 ದಿನಾಂಕ: 21.01.2023
C.No:- 995293

**ಸುತ್ತೋಲೆ**

**ವಿಷಯ:** ಗ್ರಾಮ ಪಂಚಾಯಿತಿ ಮತ್ತು ಗ್ರಂಥಾಲಯಗಳಲ್ಲಿ "**ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ**" ಅಂಗವಾಗಿ 24 ನೇ ಜನವರಿ 2023 ರಿಂದ 08 ನೇ ಮಾರ್ಚ್ 2023 ರವರೆಗೆ 6 ವಾರಗಳ ಕಾಲ ಅಭಿಯಾನವನ್ನು ಆಯೋಜಿಸುವ ಕುರಿತು.

*****

ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು 2008 ರಿಂದ ಪ್ರತಿ ವರ್ಷವೂ ಆಚರಿಸಲಾಗುತ್ತಿದ್ದು, ಹೆಣ್ಣು ಮಕ್ಕಳು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಸವಾಲುಗಳ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ಅವರ ಹಕ್ಕುಗಳು ಮತ್ತು ಸಬಲೀಕರಣಕ್ಕೆ ಉತ್ತೇಜಿಸಲಾಗುತ್ತಿದೆ.

ಕಳೆದ ವರ್ಷಗಳಂತೆ, ಈ ಬಾರಿಯೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಇತರೆ ಇಲಾಖೆಗಳ ಮತ್ತು ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ಗ್ರಂಥಾಲಯಗಳಲ್ಲಿ **24 ನೇ ಜನವರಿ 2023** ರಿಂದ **08 ನೇ ಮಾರ್ಚ್ 2023** ರವರೆಗೆ **6 ವಾರಗಳ ಕಾಲ ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯನ್ನು** ಅಭಿಯಾನದಂತೆ ಆಚರಿಸಲು ಉದ್ದೇಶಿಸಲಾಗಿದೆ.

ಈ ಅಭಿಯಾನದ ಮೂಲಕ ಹೆಣ್ಣುಮಕ್ಕಳ ಗುಣಮಟ್ಟದ ಶಿಕ್ಷಣ, ಜೀವನ ಕೌಶಲ್ಯ ಶಿಕ್ಷಣ, ವೃತ್ತಿ ಆಧಾರಿತ ಶೈಕ್ಷಣಿಕ ಆಯ್ಕೆಗಳು ಮತ್ತು ಪೂರ್ವಾಗ್ರಹದಿಂದ ಮುಕ್ತವಾಗಿ ಸಮಾನ ಅವಕಾಶದೊಂದಿಗೆ ವಿದ್ಯಾವಂತ ವೃತ್ತಿಪರರಾಗಲು ಯುವತಿಯರನ್ನು ಬೆಂಬಲಿಸುವ ಪ್ರತಿಜ್ಞೆಯನ್ನು ಕೈಗೊಳ್ಳಲು ಉತ್ತೇಜಿಸುವುದು ಮತ್ತು ಈ ಕೆಳಗಿನ ಸಮಸ್ಯೆಗಳ ಕುರಿತು ಗ್ರಾಮೀಣ ಭಾಗ ಹೆಣ್ಣುಮಕ್ಕಳಿಗೆ /ಮಹಿಳೆಯರಿಗೆ/ಪುರುಷರಿಗೆ/ ಹಿರಿಯನಾಗರಿಕರುಗಳಿಗೆ/ಸಮುದಾಯಗಳಿಗೆ ಅರಿವು ಮೂಡಿಸಲು ಉದ್ದೇಶಿಸಲಾಗಿದೆ.

- ✓ **ಶಿಕ್ಷಣ**:- ಹೆಣ್ಣುಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಡಬೇಕಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣವು ಪುರುಷರ ಸಾಕ್ಷರತೆಯ ಪ್ರಮಾಣಕ್ಕೆ ಹೋಲಿಸಿದರೆ ಕಡಿಮೆಯಿದೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಮೂಲಕ, ನಾವು ಅವರನ್ನು ಬೆಳೆಯಲು ಮತ್ತು ಸಬಲೀಕರಣ ಹೊಂದಲು ಸಾಧ್ಯವಾಗುವಂತೆ ಮಾಡುವುದು.
- ✓ **ಹೆಣ್ಣು ಮಕ್ಕಳ ಪೌಷ್ಟಿಕತೆ:-** ಅಪೌಷ್ಟಿಕತೆ, ರಕ್ತಹೀನತೆ ಮತ್ತು ವಿಟಮಿನ್ ಎ ಕೊರತೆಯಂತಹ ಸಮಸ್ಯೆಗಳು ವಿಶೇಷವಾಗಿ ಗ್ರಾಮೀಣ ಭಾಗದ ಹೆಣ್ಣು ಮಕ್ಕಳಲ್ಲಿ/ ಮಹಿಳೆಯರಲ್ಲಿ ತುಂಬಾ ತೀವ್ರವಾಗಿರುತ್ತದೆ. ಅಪೌಷ್ಟಿಕತೆಯ ಸಾಮಾನ್ಯ ಕಾರಣಗಳು ಸಾಕಷ್ಟು ಆರೋಗ್ಯಕರ ಆಹಾರ ಮತ್ತು ಮಕ್ಕಳ ಆರೈಕೆಯ ಕೊರತೆಯಿಂದಾಗಿರುತ್ತದೆ ಎಂಬುದನ್ನು ಅರ್ಥೈಸಿ ಹೆಣ್ಣುಮಕ್ಕಳ ಆಹಾರ ಕ್ರಮವನ್ನು ತಿಳಿಸುವುದರ ಮೂಲಕ ಪೌಷ್ಟಿಕ ಮಟ್ಟವನ್ನು ಉತ್ತಮಗೊಳಿಸುವುದು.
- ✓ **ಬಾಲ್ಯ ವಿವಾಹ:-** ಎನ್.ಎಫ್.ಹೆಚ್.ಎಸ್-5ರ ಸಮೀಕ್ಷೆಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 21.3% ಹೆಣ್ಣು ಮಕ್ಕಳು ತಮ್ಮ ಶಿಕ್ಷಣ ಮತ್ತು ಬಾಲ್ಯದಿಂದ ವಂಚಿತರಾಗಿ ಬಾಲ್ಯ ವಿವಾಹಕ್ಕೆ ಒಳಗಾಗುತ್ತಿದ್ದಾರೆ, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡುವುದರಿಂದ ಮದುವೆಯ ವಯಸ್ಸನ್ನು ಮುಂದೂಡುವುದು ಹಾಗೂ ಶಿಕ್ಷಣ

ಮುಂದುವರೆಸಿ ತಮಗೆ ಇಷ್ಟವಾದ ಪದವಿಯನ್ನು ಪಡೆಯಲು ಸಹಾಯಕವಾಗುತ್ತದೆ. ಇದರಿಂದ, ಬಾಲ್ಯವಿವಾಹವನ್ನು ತಪ್ಪಿಸಲು ಸಾಧ್ಯವಾಗಲಿದೆ.

✓ **ಹೆಣ್ಣು ಮಕ್ಕಳ ರಕ್ಷಣೆ**- ಹೆಣ್ಣು ಮಕ್ಕಳ ಮೇಲಿನ ದೌರ್ಜನ್ಯ, ಹೆಣ್ಣುಮಕ್ಕಳ ಸಾಗಾಣಿಕೆ, ಮತ್ತು ಇತರೆ ಸಮಸ್ಯೆಗಳನ್ನು ತಗ್ಗಿಸಲು ಹೆಣ್ಣುಮಕ್ಕಳಿಗೆ/ಮಹಿಳೆಯರಿಗೆ/ಪುರುಷರಿಗೆ/ಹಿರಿಯನಾಗರಿಕರುಗಳಿಗೆ/ಸಮುದಾಯಗಳಿಗೆ ಕಾನೂನಿನ ಹಕ್ಕುಗಳ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವುದು ಬಹುಮುಖ್ಯವಾಗಿದೆ.

**ಚಟುವಟಿಕೆಗಳ ಯೋಜನೆ (Plan of Activities)**

1. ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ **ಅನುಬಂಧ-1 ಮತ್ತು 2** ರಲ್ಲಿ **24 ನೇ ಜನವರಿ 2023 ರಿಂದ 08ನೇ ಮಾರ್ಚ್ 2023** ರವರೆಗೆ **6 ವಾರಗಳ ಕಾಲ** ಆಯೋಜಿಸಬಹುದಾದ ಚಟುವಟಿಕೆಗಳ ಯೋಜನೆಯನ್ನು ಮತ್ತು ಭಾಗಿದಾರರುಗಳ ವಿವರಗಳನ್ನು ನೀಡಲಾಗಿದೆ. ಅದರಂತೆ **ಗ್ರಾಮ ಪಂಚಾಯಿತಿಯ ಶಿಕ್ಷಣ ಕಾರ್ಯಪಡೆ**ಯ ಮುಂದಾಳತ್ವದಲ್ಲಿ ಈ ಅಭಿಯಾನವನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಮತ್ತು ಗ್ರಂಥಾಲಯಗಳಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.

2. **24 ನೇ ಜನವರಿ 2023** - ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಅಂಗವಾಗಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ವಸತಿ ನಿಲಯ ವಿದ್ಯಾರ್ಥಿನಿಯರೊಡನೆ **"ಕಾಫಿಯೊಂದಿಗೆ ಚರ್ಚೆ"** ಎಂಬ ವಿಶೇಷ ಕಾರ್ಯಕ್ರಮವನ್ನು ಈ ಕೆಳಕಂಡಂತೆ ಆಯೋಜಿಸುವ ಕುರಿತು.
   - ಜಿಲ್ಲೆಯಲ್ಲಿನ ಹಾಸ್ಟೆಲ್‌ಗಳ ವಿದ್ಯಾರ್ಥಿನಿಯರುಗಳ ಒಂದು ದಿನದ ಪೂರ್ಣಾವಧಿಯ ಭೇಟಿಗಾಗಿ ವೇಳಾ ಪಟ್ಟಿಯನ್ನು ತಯಾರಿಸುವುದು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ವಿಶೇಷವಾಗಿ ಮಹಿಳಾ ಅಧಿಕಾರಿಗಳಿಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ತಿಳಿಸುವುದು.
   - ಭೇಟಿಯ ಸಮಯದಲ್ಲಿ ಮೊದಲನೆಯದಾಗಿ **ಅನುಬಂಧ-1** ರಲ್ಲಿ ತಿಳಿಸಿರುವ ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು.
   - ಭೇಟಿಯ ಸಮಯದಲ್ಲಿ ವಿದ್ಯಾರ್ಥಿನಿಯರಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಕಚೇರಿಯ ವಿವಿಧ ಶಾಖೆಗಳ ಹಾಗೂ ಕಾರ್ಯವೈಖರಿಗಳ ಬಗ್ಗೆ ಪರಿಚಯಿಸುವುದು.
   - ಭೇಟಿಯ ಸಮಯದಲ್ಲಿ ವಿದ್ಯಾರ್ಥಿನಿಯರಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ವಿಶೇಷವಾಗಿ ಮಹಿಳಾ ಅಧಿಕಾರಿಗಳೊಂದಿಗೆ ಸಂವಹನವನ್ನು ನಡೆಸಲು ಅವಕಾಶ ಮಾಡಿಕೊಡುವುದು.
   - ಹಾಸ್ಟೆಲ್‌ಗಳ ವಿದ್ಯಾರ್ಥಿನಿಯರು ತಮ್ಮ ಬೇಡಿಕೆಗಳು/ ಸಮಸ್ಯೆಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಲು ಅವಕಾಶ ಕಲ್ಪಿಸುವುದು.
   - ವಿದ್ಯಾರ್ಥಿನಿಯರಿಗೆ ಪಂಚಾಯತ್ ರಾಜ್ ವ್ಯವಸ್ಥೆ ಮತ್ತು ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಇರುವ ಮೀಸಲಾತಿ, ಹಾಗೂ ತರೆ ಆಡಳಿತಾತ್ಮಕ ಮತ್ತು ಅಭಿವೃದ್ಧಿ ವಿಷಯಗಳ ಕುರಿತು ತಿಳಿಯಪಡಿಸುವುದು.
   - ಭೇಟಿಯ ದಿನದ ಅಂತಿಮದಲ್ಲಿ, ವಿದ್ಯಾರ್ಥಿನಿಯರು ತಮ್ಮ ಒಂದು ದಿನದ ಭೇಟಿಯಲ್ಲಿ ಗಮನಿಸಲಾದ ಅಂಶಗಳು ಮತ್ತು ಕಲಿಕೆಗಳ ಕುರಿತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳೊಂದಿಗೆ ಅನುಭವ ಹಂಚಿಕೊಳ್ಳಲು ಅನುವು ಮಾಡಿಕೊಡುವುದು.

- ಒಂದು ದಿನದ ಪೂರ್ಣಾವಧಿಯ ಬೇಟಿಯ ಕಾರ್ಯಕ್ರಮದ ದಾಖಲೀಕರಣವನ್ನು ಫೋಟೊ ಮತ್ತು ವಿಡಿಯೋದೊಂದಿಗೆ ತಯಾರಿಸುವುದು ಹಾಗೂ ಪಂಚಾಯತ್ ರಾಜ್ ಆಯುಕ್ತಾಲಯವು ಸೃಜಿಸಿರುವ ಈ ಕೆಳಗಿನ Google drive ಲಿಂಕ್‌ನಲ್ಲಿ ಇಂಧೀಕರಿಸುವುದು.
  https://drive.google.com/drive/folders/1rNb5S6zws9WMMCS0MY-WlbVtFf-SB99?usp=share_link

**24 ನೇ ಜನವರಿ** ದಿನದಂದು "**ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ**"**ಯನ್ನು ಹಾಗೂ 24 ನೇ ಜನವರಿ 2023 ರಿಂದ 08 ನೇ ಮಾರ್ಚ್ 2023** ರವರೆಗೆ **6 ವಾರಗಳ ಕಾಲ** ಚಟುವಟಿಕೆಗಳನ್ನು (**ಅನುಬಂಧ-2)** ಅರ್ಥಪೂರ್ಣವಾಗಿ ಆಯೋಜಿಸುವುದರ ಮೂಲಕ ಹೆಣ್ಣು ಮಕ್ಕಳಿಗೆ ತಮ್ಮ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಲಭ್ಯವಿರುವ ಅವಕಾಶಗಳ ಬಗ್ಗೆ ಖಚಿತಪಡಿಸಲು ಹಾಗೂ ಶಿಕ್ಷಣದ ಹಕ್ಕಿನೊಂದಿಗೆ ಆರೋಗ್ಯ, ಆರ್ಥಿಕ ಸಬಲೀಕರಣದ ಅವಕಾಶಗಳು ಸಿಕ್ಕಾಗ ಅವರುಗಳು ಏನೆಲ್ಲ ಸಾಧಿಸಬಹುದು ಮತ್ತು ಅವರ ಸಾಧನೆಗೆ ಮಿತಿಯಿರುವುದಿಲ್ಲ ಎಂಬುದನ್ನು ಅರ್ಥಮಾಡಿಸಲಾಗುವುದು ಹಾಗೂ ಮುಂದಿನ ವರ್ಷಗಳಲ್ಲಿಯೂ ಈ ರೀತಿಯ ಚಟುವಟಿಕೆಗಳನ್ನು ಆಯೋಜಿಸುವ ಮೂಲಕ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳ ಸಬಲೀಕರಣಕ್ಕೆ ಸಮಾನ ಅವಕಾಶ ಲಭ್ಯವಾಗುವಂತೆ ಸಮುದಾಯಗಳನ್ನು ಜಾಗೃತಗೊಳಿಸಲಾಗುತ್ತದೆ ಎಂದು ಭಾವಿಸಲಾಗಿದೆ. ಈ ಅಭಿಯಾನಕ್ಕೆ ತಗಲುವ ವೆಚ್ಚವನ್ನು ಗ್ರಾಮ ಪಂಚಾಯಿತಿಯ ಸ್ವಂತ ನಿಧಿಯಿಂದ ಭರಿಸುವುದು.

**(ಆಯುಕ್ತರಿಂದ ಕರಡು ಅನುಮೋದಿತ)**

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.

**ಇವರಿಗೆ:**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು,(ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)
3. ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯಿತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ)

**ಪ್ರತಿಯನ್ನು ಮಾಹಿತಿಗಾಗಿ:**

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
4) ಸರ್ಕಾರದ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರ ಆಪ್ತ ಕಾರ್ಯದರ್ಶಿ ಬೆಂಗಳೂರು.
5) ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಬೆಂಗಳೂರು.

6) ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
7) ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8) ನಿರ್ದೇಶಕರು, (ಐ.ಸಿ.ಪಿ.ಎಸ್), ಮಕ್ಕಳ ರಕ್ಷಣಾ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
9) ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯ, ಬೆಂಗಳೂರು.
10) ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ.
11) ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರಿಗೆ ಸೂಕ್ತ ಬೆಂಬಲ ಮತ್ತು ಸಹಕಾರ ನೀಡಲು ಕ್ರಮವಹಿಸುವುದು.
12) ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಕೃಷಿ ಭವನ, ಹಡ್ಸ್‌ನ್ ವೃತ್ತ, ನೃಪತುಂಗ ರಸ್ತೆ, ಬೆಂಗಳೂರು
13) ಮಾಹಿತಿ ಕೇಂದ್ರ/ವೆಬ್‌ಸೈಟ್, ಗ್ರಾಅಪ ಇಲಾಖೆ.
14) ಕಛೇರಿ ರಕ್ಷಾ ಕಡತಕ್ಕೆ.

## ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಅಂಗವಾಗಿ ಅಭಿಯಾನ

**24 ನೇ ಜನವರಿ 2023** ರಿಂದ **08 ನೇ ಮಾರ್ಚ್ 2023** ರವರೆಗೆ **6 ವಾರಗಳ**

**ಅನುಬಂಧ-1**

**ಪ್ರತಿಜ್ಞಾ ವಿಧಿ ಬಾಲ್ಯ ವಿವಾಹ ವಿರೋಧಿ ಹಾಗೂ ಶಿಕ್ಷಣಕ್ಕೆ ಉತ್ತೇಜನ**

"ನಾನು ಹದಿಹರೆಯದ ಹೆಣ್ಣು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಸಂಪೂರ್ಣ ಬೆಂಬಲ ನೀಡುತ್ತೇನೆ. ಲಿಂಗ ತಾರತಮ್ಯ, ಬಾಲ್ಯ ವಿವಾಹ ಮುಂತಾದ ಸಮಸ್ಯೆಗಳನ್ನು ಪರಿಹರಿಸುವ ಪ್ರಯತ್ನಗಳಿಗೆ ಕೈಜೋಡಿಸುವುದರ ಮೂಲಕ ಅವರ ಜೀವನಮಟ್ಟ ಅಭಿವೃದ್ಧಿಗೆ ಬೆಂಬಲಿಸುತ್ತೇನೆ. 18 ವರ್ಷದೊಳಗಿನ ಹೆಣ್ಣುಮಕ್ಕಳು ಮತ್ತು 21 ವರ್ಷದೊಳಗಿನ ಗಂಡು ಮಕ್ಕಳಿಗೆ ಯಾರೇ ಆಗಲಿ, ಯಾವುದೇ ಧರ್ಮ, ಜಾತಿ, ಸಮುದಾಯ, ಪಂಗಡಗಳು ಬಾಲ್ಯವಿವಾಹ ಮಾಡಲು ಪ್ರಯತ್ನಿಸುವುದು, ನಡೆಸುವುದು ಶಿಕ್ಷಾರ್ಹ ಎಂಬುದನ್ನು ನಾನು ಪಾಲಿಸುತ್ತೇನೆ ಮತ್ತು ಈ ವಿಚಾರದ ಕುರಿತು ಪ್ರಚಾರ ಮಾಡುತ್ತೇನೆ ಎಂದು ಈ ಮೂಲಕ ಪ್ರತಿಜ್ಞೆ ಮಾಡುತ್ತೇನೆ."

# ಅನುಬಂಧ-2

**ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಅಂಗವಾಗಿ ಅಭಿಯಾನದ 6 ವಾರಗಳ ಕಾಲ, ಗ್ರಾಮ ಪಂಚಾಯಿತಿಗಳಿಂದ ಹಮ್ಮಿಕೊಳ್ಳಬೇಕಾದ ಕಾರ್ಯಕ್ರಮ/ಚಟುವಟಿಕೆಗಳ ವಿವರ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮಹಿಳೆಯರ ಮತ್ತು ಮಕ್ಕಳ ಕಥಾ ವಸ್ತುಗಳನ್ನು ಕುರಿತು ಹೆಸರಾಂತ ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ ನಿರ್ಮಾಣದ ಸರಣಿ ಚಿತ್ರಗಳು ಹಾಗೂ ANS SIRD PR ಸಂಸ್ಥೆಯ ಯೂಟ್ಯೂಬ್ ಚಾನೆಲ್ ನಲ್ಲಿ ಪ್ರಕಟವಾಗಿರುವ 'ಹೆಣ್ಣು ಮಕ್ಕಳ/ಮಹಿಳೆಯರ ಕುರಿತಾದ ಜಾಗೃತಿ ವೀಡಿಯೋ ತುಣುಕುಗಳನ್ನು ಪ್ರತಿವಾರವೂ ಒಂದು ದಿನ ಗ್ರಂಥಾಲಯದಲ್ಲಿ ಪ್ರದರ್ಶಿಸುವುದು.**

**1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಯೂಟ್ಯೂಬ್ ಚಾನೆಲ್ :**

**@DepartmentofWCDKarnataka**

**2. ANS SIRD & PR ಸಂಸ್ಥೆಯ ಯೂಟ್ಯೂಬ್ ಚಾನೆಲ್ : @sirdmysore**

| ಜನವರಿ 2023 | ವಿಷಯ | ಕಾರ್ಯಕ್ರಮ/ಚಟುವಟಿಕೆಗಳು | ಜವಾಬ್ದಾರಿ |
|---|---|---|---|
| **1 ನೇ ವಾರ (24 ರಿಂದ 30 ಜನವರಿ 2023)** | 24 ನೇ ಜನವರಿ 2023 ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆ.<br><br>26 ನೇ ಗಣರಾಜ್ಯೋತ್ಸವದ ದಿನ | ಪೂರ್ವ ತಯಾರಿ ನಡೆಸುವುದು.<br><br>ಜಾಥಾ ಕಾರ್ಯಕ್ರಮ<br>ಕರಪತ್ರ, ನಾಮ ಫಲಕ, ಧ್ವನಿವರ್ಧಕಗಳ ಮೂಲಕ ಪ್ರಚುರಪಡಿಸುವುದು.<br><br>ರಾಷ್ಟ್ರೀಯ ಹೆಣ್ಣು ಮಕ್ಕಳ ದಿನಾಚರಣೆಯ ಅಂಗವಾಗಿ ಅಭಿಯಾನಕ್ಕೆ ಚಾಲನೆ ನೀಡುವುದು<br><br>ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ಗ್ರಾಮ ಪಂಚಾಯಿತಿಯ ಹದಿಹರೆಯದ ಹೆಣ್ಣು ಮಕ್ಕಳನ್ನು ಕರೆಸಿ ಈ ಮೇಲಿನ ಪ್ರತಿಜ್ಞೆಯನ್ನು ತೆಗೆದುಕೊಳ್ಳಲು ಸಭೆ ಸೇರಿಸುವುದು ಮತ್ತು ಹೆಣ್ಣು ಮಕ್ಕಳಿಗೆ ಲಘು ಉಪಹಾರವನ್ನು ಏರ್ಪಡಿಸುವುದು.<br><br>ಶಾಲೆಗಳಲ್ಲಿ/ ಗ್ರಾಮ ಪಂಚಾಯತಿ ಗ್ರಂಥಾಲಯದಲ್ಲಿ ಗಣರಾಜ್ಯೋತ್ಸವ ದಿನದ ಮಹತ್ವವನ್ನು ಹೆಣ್ಣು ಮಕ್ಕಳಿಗೆ ತಿಳಿಸುವುದು.<br><br>ವಾರದಲ್ಲಿ ಒಂದು ದಿನ ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಉಚಿತ ನೊಂದಣಿ ಶಿಬಿರ ಏರ್ಪಡಿಸುವುದು. ಗ್ರಾಮ ಪಂಚಾಯಿತಿ ವ್ಯಾಪ್ತಿಯ 6-18 ವರ್ಷ ವಯಸ್ಸಿನ ಎಲ್ಲಾ ಹೆಣ್ಣು ಮಕ್ಕಳನ್ನು ಉಚಿತವಾಗಿ ಗ್ರಾಮ ಪಂಚಾಯಿತಿ ಗ್ರಂಥಾಲಯಕ್ಕೆ ನೋಂದಾಯಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯಿತಿ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು<br><br>ಜಾಥಾ ಕಾರ್ಯಕ್ರಮ ಕರಪತ್ರ, ನಾಮ ಫಲಕ, ಧ್ವನಿವರ್ಧಕಗಳ ಮೂಲಕ ಪ್ರಚಾರ ಪಡಿಸುವುದು. |

| | | | |
|---|---|---|---|
| | ಸಾಂಸ್ಕೃತಿಕ ಕಾರ್ಯಕ್ರಮ | ಸಾಂಸ್ಕೃತಿಕ ಕಾರ್ಯಕ್ರಮ.<br>ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸ್ಥಳೀಯ ಹೆಣ್ಣು ಮಕ್ಕಳಿಗೆ /ಮಹಿಳೆಯರಿಗೆ ಸನ್ಮಾನಿಸುವುದು. | |
| **ಫೆಬ್ರುವರಿ 2023** | **ವಿಷಯ** | **ಕಾರ್ಯಕ್ರಮ/ಚಟುವಟಿಕೆಗಳು** | **ಜವಾಬ್ದಾರಿ** |
| **02 ನೇ ವಾರ (01 ರಿಂದ 06 ಫೆಬ್ರುವರಿ 2023)** | ಕೇರಂ (Carrom) / ಚೆಸ್ (Chess) ಆಟದ ಸ್ಪರ್ಧೆ | ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಹೆಣ್ಣು ಮಕ್ಕಳಿಗೆ ಕೇರಂ (Carrom) / ಚೆಸ್ (Chess) ಆಟದ ಸ್ಪರ್ಧೆಯನ್ನು ಆಯೋಜಿಸುವುದು ಮತ್ತು ಅಂತಿಮವಾಗಿ ಎಲ್ಲಾ ಸುತ್ತುಗಳಲ್ಲಿ ಗೆದ್ದವರಿಗೆ ಬಹುಮಾನವನ್ನು ನೀಡುವುದು. | ಗ್ರಾಮ ಪಂಚಾಯಿತಿ, ಗ್ರಾಮ ಪಂಚಾಯತಿ ಗ್ರಂಥಾಲಯ |
| | ವೃತ್ತಿಪರ ಮಾರ್ಗದರ್ಶನ | ಸ್ಥಳೀಯ ಸಂಪನ್ಮೂಲ ವ್ಯಕ್ತಿಯನ್ನು ಕರೆಸಿ ಗ್ರಾಮ ಪಂಚಾಯತಿ ಗ್ರಂಥಾಲಯದಲ್ಲಿ ಹೆಣ್ಣು ಮಕ್ಕಳಿಗೆ ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮವನ್ನು ಆಯೋಜಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |
| | ಗಟ್ಟಿಯಾಗಿ ಓದಿ ಹೇಳುವ (ReadAloud) ಕಾರ್ಯಕ್ರಮ | ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಸಾಧನೆ ಮಾಡಿದ ಮಹಿಳೆಯರ ಪುಸ್ತಕಗಳ ಕುರಿತು ಹೆಣ್ಣು ಮಕ್ಕಳಿಗೆ ಗಟ್ಟಿಯಾಗಿ ಓದಿ ಹೇಳುವ (ReadAloud) ಕಾರ್ಯಕ್ರಮವನ್ನು ಆಯೋಜಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು |
| **03 ನೇ ವಾರ (07 ರಿಂದ 13 ಫೆಬ್ರುವರಿ 2023)** | ವೈಜ್ಞಾನಿಕ ಅರಿವು ಮತ್ತು ಮೂಡನಂಬಿಕೆಗಳ ನಿವಾರಣೆ | ನಮ್ಮ ದೈನಂದಿನ ಜೀವನದಲ್ಲಿ ವಿಜ್ಞಾನದ ಮೌಲ್ಯವನ್ನು ತಿಳಿಯಲು ಉತ್ತೇಜಿಸುವುದು. ಜಿಲ್ಲೆಯಲ್ಲಿನ ಭಾರತ ಜ್ಞಾನ ವಿಜ್ಞಾನ ಸಮಿತಿಗಳ ಸಹಯೋಗದಲ್ಲಿ ವಿಜ್ಞಾನ ಅರಿವು, ಪವಾಡ ಬಯಲು  ಕಾರ್ಯಕ್ರಮಗಳನ್ನು ಆಯೋಜಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಭಾರತ ಜ್ಞಾನ ವಿಜ್ಞಾನ ಸಮಿತಿ |
| | ಋತು ಚಕ್ರದ ಶುಚಿತ್ವ ಹಾಗೂ ನಿರ್ವಹಣೆ | ಉಪನ್ಯಾಸ ಮತ್ತು ಜಾಗೃತಿ ಕಾರ್ಯಕ್ರಮ ಆಯೋಜಿಸುವುದು.<br><br>ಸ್ನೇಹ ಕ್ಲಿನಿಕ್‌ನ<br>ಸೌಲಭ್ಯಗಳ ಬಳಕೆ, ಋತು ಚಕ್ರದ ಶುಚಿತ್ವ ಹಾಗೂ ನಿರ್ವಹಣೆ | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |

| | | | |
|---|---|---|---|
| | ಕಥೆ ಹೇಳುವ (Storytelling) ಕಾರ್ಯಕ್ರಮ | ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ, ಸಾಧನೆ ಮಾಡಿದ ಮಹಿಳೆಯರ ಪುಸ್ತಕಗಳ ಕುರಿತು ಹೆಣ್ಣು ಮಕ್ಕಳಿಗೆ ಕಥೆ ಹೇಳುವ (Storytelling) ಕಾರ್ಯಕ್ರಮವನ್ನು ಆಯೋಜಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |
| **04ನೇ ವಾರ (14 ರಿಂದ 20 ಫೆಬ್ರುವರಿ 2023)** | ತಂದೆ-ಮಗಳ ಬಾಂಧವ್ಯವನ್ನು ವೃದ್ಧಿಸುವುದು | ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ತಂದೆ-ಮಗಳನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಕರೆಸಿ "ತಮ್ಮ ಹೆಣ್ಣು ಮಕ್ಕಳ ಬಗ್ಗೆ ಏಕೆ ಹೆಮ್ಮೆಪಡುತ್ತಾರೆ?" ಎಂಬ ಕುರಿತು ತಮ್ಮ ಹೆಣ್ಣು ಮಕ್ಕಳ ಜೊತೆ ಬರೆದು, ಓದಿ ಹೇಳುವ ಕಾರ್ಯಕ್ರಮ ವನ್ನು ಆಯೋಜಿಸುವುದು ಹಾಗೂ ಗಂಡು ಮಕ್ಕಳನ್ನು ಹೇಗೆ ಆರೈಕೆ ಮಾಡುವರು/ನೋಡುವರು? ಅದೇ ರೀತಿ ಹೆಣ್ಣು ಮಕ್ಕಳನ್ನು ಸಮಾನವಾಗಿ ಆರೈಕೆ ಮಾಡುವರು/ನೋಡುವರು ಎಂದು ಪ್ರತಿಜ್ಞೆಯನ್ನು ತೆಗೆದುಕೊಳ್ಳುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |
| | ಕಾನೂನುಗಳ ಕುರಿತಾಗಿ, ಸಂವಿಧಾನ ಮತ್ತು ಸಬಲಿಕರಣ ಕಾರ್ಯಕ್ರಮ | ಈ ಕೆಳಗಿನ ವಿಷಯಗಳಲ್ಲಿ ಅರಿವು ಮೂಡಿಸಲು ಉಪನ್ಯಾಸ ಮತ್ತು ಜಾಗೃತಿ ಕಾರ್ಯಕ್ರಮ ಆಯೋಜಿಸುವುದು.<br>✓ ಮಾನವ ಸಾಗಾಣಿಕೆ ತಡೆ ಕಾಯ್ದೆ<br>✓ ಬಾಲ್ಯ ವಿವಾಹ ನಿಷೇಧ ಕಾಯ್ದೆ<br>✓ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ನಿಷೇಧ ಕಾಯ್ದೆ<br>✓ ಮಕ್ಕಳ ಹಕ್ಕುಗಳು-ಬಾಲ ನ್ಯಾಯ ಕಾಯ್ದೆ | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |
| | ಆದರ್ಶ ಮಾದರಿ ಮಹಿಳೆಯರ ಕುರಿತು ಪ್ರಬಂಧ ಬರೆಯುವುದು | ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಣ್ಣು ಮಕ್ಕಳನ್ನು ಗ್ರಂಥಾಲಯಕ್ಕೆ ಕರೆಸಿ, ಹೆಣ್ಣು ಮಕ್ಕಳಿಗೆ ಇಷ್ಟವೆನಿಸಿರುವ/ ಖ್ಯಾತಿ ಹೊಂದಿರುವ/ ಹೆಸರಾಂತ ಮಹಿಳೆಗೆ ಹೆಣ್ಣು ಮಕ್ಕಳು ಆ ಮಹಿಳೆಯನ್ನು ಏಕೆ ಇಷ್ಟಪಡುವರು? ಎಂಬ ಕುರಿತು ಪತ್ರ/ಪ್ರಬಂಧ ಬರೆಯುವ ಕಾರ್ಯಕ್ರಮವನ್ನು ಆಯೋಜಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |
| | ಸಾಧಕ ವನಿತೆಯರ ಅನುಭವಗಳ ಹಂಚಿಕೊಳ್ಳುವು ದು | ರೂಢಿಗತವಾಗಿ ಮಹಿಳೆಯರನ್ನು ಸೀಮಿತಗೊಳಿಸಿರುವ ಅಂಶಗಳಿಂದ ಮುಕ್ತವಾಗಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹೆಸರಾಂತ ಮಹಿಳೆಯರು/ ಸಾಧಕಿಯರು/ ಬರಹಗಾರ್ತಿಯರು/ ಮಹಿಳಾ ವೈದ್ಯರು/ ಮಹಿಳಾ ಅಧಿಕಾರಿಗಳನ್ನು ಆಹ್ವಾನಿಸಿ, ಅವರ ಅನುಭವಗಳನ್ನು, ಹೆಣ್ಣು ಮಕ್ಕಳ ಜೊತೆ | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, |

| | | | |
|---|---|---|---|
| | | ಹಂಚಿಕೊಳ್ಳಲು ಗ್ರಾಮ ಪಂಚಾಯಿತಿ ಗ್ರಂಥಾಲಯದಲ್ಲಿ ಸಂವಾದ ಕಾರ್ಯಕ್ರಮವನ್ನು ಆಯೋಜಿಸುವುದು. | ಸ್ಥಳೀಯ ಸಂಘ ಸಂಸ್ಥೆಗಳು. |
| **05 ನೇ ವಾರ (21 ರಿಂದ 27 ಫೆಬ್ರುವರಿ 2023)** | ಮನೋಭಾವದಲ್ಲಿ ಬದಲಾವಣೆ ತರುವುದು (Breaking Stereotypes) | **ಚಟುವಟಿಕೆ:** ಹೆಣ್ಣು ಮಕ್ಕಳಿಗೆ ಈ ಕೆಳಗಿನ ವೃತ್ತಿಗಳ ಚಿತ್ರಗಳನ್ನು ಬಿಡಿಸಲು ತಿಳಿಸುವುದು: ವೈದ್ಯರು/ ನರ್ಸ್/ ಅಗ್ನಿಶಾಮಕ/ ಬೆಂಕಿ ಆರಿಸುವವರು/ ಸೈನಿಕರು/ ಶಿಕ್ಷಕರು/ ಪ್ರಾಂಶುಪಾಲರು/ ಪೈಲೆಟ್/ ಸೆಕ್ರೆಟರಿ/ ಗಗನ ಸಖಿಯರು.<br>ಹೆಣ್ಣು ಮಕ್ಕಳು ಈ ಕೆಳಗಿನ ವೃತ್ತಿಗಳನ್ನು ಪುರುಷರಿಗೆ ಸೀಮಿತವಾದ ವೃತ್ತಿ ಎಂದು ಭಾವಿಸಿ ಬಿಡಿಸಿದ್ದಾರೆಯೇ ?<br><br>ವೈದ್ಯರು/ಅಗ್ನಿಶಾಮಕ/ ಬೆಂಕಿ ಆರಿಸುವವರು/ ಸೈನಿಕರು/ಪ್ರಾಂಶುಪಾಲರು/ಪೈಲೆಟ್<br><br>ಹೆಣ್ಣು ಮಕ್ಕಳು ಈ ಕೆಳಗಿನ ವೃತ್ತಿಗಳನ್ನು ಮಹಿಳೆಯರಿಗೆ ಸೀಮಿತವಾದ ವೃತ್ತಿ ಎಂದು ಭಾವಿಸಿ ಬಿಡಿಸಿದ್ದಾರೆಯೇ ?<br><br>ನರ್ಸ್/ ಶಿಕ್ಷಕರು/ಸೆಕ್ರೆಟರಿ/ ಗಗನಸಖಿಯರು.<br><br>ಹೆಣ್ಣು ಮಕ್ಕಳಿಗೆ ಅವರು ಬಿಡಿಸಿರುವ ಚಿತ್ರಗಳ ವೃತ್ತಿಗಳು ಏಕೆ ಪುರುಷರಿಗೆ ಅಥವಾ ಮಹಿಳೆಯರಿಗೆ ಸೀಮಿತವಾದ ವೃತ್ತಿ ಎಂದು ಭಾವಿಸಿದ್ದಾರೆ? ಎಂದು ಪ್ರಶ್ನೆ ಹಾಕುವುದು ? ಮಕ್ಕಳು ಉತ್ತರಗಳನ್ನು ನೀಡಿದ ನಂತರ, ವ್ಯಕ್ತಿಗಳು ಈ ತರಹದ ಸ್ಟಿರಿಯೋ ಟೈಪ್ ಗಳನ್ನು ಮೊಟಕುಗೊಳಿಸಿ ಹಾಗೂ ಯಾವುದೇ ವೃತ್ತಿ ಲಿಂಗತ್ವ ಸೀಮಿತವಲ್ಲ ಎನ್ನುವ ಉದಾಹರಣೆಗಳನ್ನು ನೀಡುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |
| | ಸಾಂಪ್ರದಾಯಿಕ ಆಲೋಚನೆಗಳು (Gender Light bulb) | **ಚಟುವಟಿಕೆ** : ಹೆಣ್ಣು ಮಕ್ಕಳಿಗೆ ದೊಡ್ಡದಾದ ಲೈಟ್ ಬಲ್ಬ್ ಆಕಾರದ ಪೇಪರ್ ಕಟಿಂಗ್ಸ್ ಮಾಡಲು ತಿಳಿಸುವುದು, ಲೈಟ್ ಬಲ್ಬ್ ಆಕಾರದ ಪೇಪರ್ ಕಟಿಂಗ್ಸನಲ್ಲಿ, (Gender Light bulb) ಸಾಂಪ್ರದಾಯಿಕ ಆಲೋಚನೆಗಳಿಂದಾದ ಕ್ಷಣಗಳನ್ನು ನೆನಪಿಸಿಕೊಳ್ಳಲು ತಿಳಿಸುವುದು: ಉದಾಹರಣೆ: ಹೆಣ್ಣು ಮಕ್ಕಳು ಕೆಲವು ಕ್ರೀಡೆಗಳನ್ನು ಆಡಬಾರದು ಅಥವಾ ಕೆಲವು ನಿರ್ದಿಷ್ಟ ವಿಷಯದ ಕುರಿತು ಓದಬಾರದು ಅಥವಾ ಹೆಣ್ಣು ಮಕ್ಕಳು ಅಡುಗೆ ಮನೆ ಕೆಲಸದಲ್ಲಿ ಸಹಾಯ ಮಾಡುವುದು; ಗಂಡು ಮಕ್ಕಳು ಆಟಿಕೆಗಳೊಂದಿಗೆ ಆಟವಾಡಬಾರದು ಅಥವಾ ಗಂಡು ಮಕ್ಕಳು ಅಳಬಾರದು ಅಥವಾ ಗಂಡು ಮಕ್ಕಳು ಅಡುಗೆ ಮನೆಯಲ್ಲಿ ಕೆಲಸ ಮಾಡಬಾರದು. ಈ ಮೇಲೆ ತಿಳಿಸಿರುವ ಉದಾಹರಣೆಯಂತೆ ಹೆಣ್ಣು ಮಕ್ಕಳಿಗೆ ಆದ ಕ್ಷಣಗಳನ್ನು ಪೇಪರ್ ಕಟಿಂಗ್ಸನಲ್ಲಿ ಮಾಡಿದ ಲೈಟ್ ಬಲ್ಬ್ ನಲ್ಲಿ ಬರೆಯಲು ತಿಳಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |

| | | | |
|---|---|---|---|
| | | ಹೆಣ್ಣು ಮಕ್ಕಳು ಬರೆದ 'Gender Light bulb' ಪೇಪರ್ ಕಟಿಂಗ್ಸ್‌ಗಳನ್ನು ಗ್ರಂಥಾಲಯದಲ್ಲಿ ಪ್ರದರ್ಶಿಸುವುದು. | |
| **06 ನೇ ವಾರ (28 ಫೆಬ್ರುವರಿ ಇಂದ 08 ಮಾರ್ಚ್ 2023)** | ಆದರ್ಶ ಮಾದರಿ ವ್ಯಕ್ತಿಗಳ ಪ್ರದರ್ಶನ (Shero Exhibition) | **ಚಟುವಟಿಕೆ- Hero ಅಲ್ಲ Shero!! : ನಾಯಕಿ ಮಾತ್ರವಲ್ಲ ಮಾದರಿ..** Shero ಎಂಬುದು ಮಹಿಳೆ, ಅವಳು ಆದರ್ಶ ಮಾದರಿ ವ್ಯಕ್ತಿ ಮತ್ತು ನಮಗೆ ಸ್ಫೂರ್ತಿ ನೀಡುವವರು. (ಅಂತಹ ಮಹಿಳೆಯು ನಮ್ಮ ಸಂಬಂಧಿಕರಾಗಿರಬಹುದು/ ಸಮುದಾಯದಲ್ಲಿನ ಮಹಿಳೆ/ ಹೆಸರಾಂತ ಮಹಿಳೆ ).<br>ಹೆಣ್ಣು ಮಕ್ಕಳಿಗೆ ಮಾದರಿಯಾದ ಮತ್ತು ಸ್ಫೂರ್ತಿ ತುಂಬಿದ ಮಹಿಳೆಯ ಚಿತ್ರವನ್ನು ಬಿಡಿಸಲು ತಿಳಿಸುವುದು ಮತ್ತು ಆ ಮಹಿಳೆಯು ಹೇಗೆ ಹೆಣ್ಣು ಮಕ್ಕಳಿಗೆ ಸ್ಫೂರ್ತಿಯಾದಳು? ಎಂಬುದರ ಕುರಿತು ಬರೆಯಲು ತಿಳಿಸುವುದು ಹಾಗೂ ಚಿತ್ರ ಬಿಡಿಸಿದ ಮಹಿಳೆಯ ಭಾವಚಿತ್ರದಲ್ಲಿ Shero Cap ಮಹಿಳೆಯ ಕುಲಾವಿ/ಟೋಪಿ ಅನ್ನು ಬಿಡಿಸಲು ತಿಳಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯಿತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |
| | ಸಂವಾದ ಕಾರ್ಯಕ್ರಮ | ಹೆಣ್ಣು ಮಕ್ಕಳ ಹಾಗೂ ಮಹಿಳೆಯರ ದಿನವನ್ನು ಏಕೆ ಆಚರಿಸಬೇಕು ? ಎಂಬುದರ ಕುರಿತು ಹೆಣ್ಣು ಮಕ್ಕಳಿಗೆ ಸಂವಾದ ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿ ಗ್ರಂಥಾಲಯ ಆವರಣದಲ್ಲಿ ಆಯೋಜಿಸುವುದು. | ಗ್ರಾಮ ಪಂಚಾಯಿತಿ ಶಿಕ್ಷಣ ಕಾರ್ಯಪಡೆ, ಗ್ರಾಮ ಪಂಚಾಯಿತಿ ಗ್ರಂಥಾಲಯ, ಸ್ಥಳೀಯ ಸಂಘ ಸಂಸ್ಥೆಗಳು. |

ನಿರ್ದೇಶಕರು(ಅಭಿವೃದ್ಧಿ)
ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ,
ಬೆಂಗಳೂರು.